KACD420015282023

**ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ**

**ಸಿ.ಸಿ. ನಂಃ 1018/2023**

ಪಿರ್ಯಾದಿದಾರರು : ಸರ್ಕಾರದ ಪರವಾಗಿ–ಅಬಕಾರಿ ನಿರೀಕ್ಷಕರು ಹೊಳಲ್ಕೆರೆ ವಲಯ, ಹೊಳಲ್ಕೆರೆ ಪೋಲೀಸ್ ಠಾಣೆ

ವಿರುದ್ಧ

ಆರೋಪಿ : ಹುಸೇನ್ ಬಿನ್ ಲೇಟ್ ರಹಿಮಾನ್ಸಾಬ್

**ದೋಷಾರೋಪಣೆ**

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿಃ ಹುಸೇನ್ ಬಿನ್ ಲೇಟ್ ರಹಿಮಾನ್ಸಾಬ್ ,
ವಯಸ್ಸುಃ *54* ವರ್ಷಗಳು,
ವೃತ್ತಿಃ ವಾಹನ ಚಾಲಕ ,
ವಾಸಃ ಶಿವಲಿಂಗಪ್ಪ ಬಡಾವಣೆ, ಹೊಳಲ್ಕೆರೆ ನಗರ,
ಹೊಳಲ್ಕೆರೆ ತಾಲ್ಲೂಕು.

ಆರೋಪಿತನಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ12–04–2023ರಂದು ಸಂಜೆ 7–20ರ ಸಮಯದಲ್ಲಿ ಹೊಳಲ್ಕೆರೆ ಟೌನ್ ಖಾಸಗಿ ಬಸ್ ನಿಲ್ದಾಣದ ಮುಂಭಾಗದ ಹೊಸದುರ್ಗಕ್ಕೆ ಹೋಗುವ ಸರ್ಕಾರಿ ರಸ್ತೆಯಲ್ಲಿ, ಆರೋಪಿತನಾದ ನೀನು ತ್ರಿಚಕ್ರ ಬಜಾಜ್ ಆಟೋ ವಾಹನ ಸಂಖ್ಯೆ ಕೆಎ–16–ಡಿ–4290 ರ ಕಪ್ಪು ಬಣ್ಣದ ಬಜಾಜ್ ಆರ್. ಇ. ಎಲ್.ಪಿ. ಜಿ.4 ಎಸ್ ಆಟೋದಲ್ಲಿ ಅಕ್ರಮವಾಗಿ ವಿವಿಧ ಮದ್ಯದ ಬ್ರಾಂಡ್ ಗಳಿಂದ ಕೂಡಿದ ಒಟ್ಟು 17.280 ಲೀಟರ್ ಮದ್ಯವನ್ನು ಕಾನೂನು ಬಾಹಿರವಾಗಿ ಯಾವುದೇ ಪರವಾನಿಗೆಯನ್ನು ಹೊಂದದೇ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿದ್ದರಿಂದ ಈ ನ್ಯಾಯಾಲಯದ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಈ ಮೇಲೆ ಹೇಳಿದ ಅದೇ ದಿನ ಸ್ಥಳ ವೇಳೆಯಲ್ಲಿ ಆರೋಪಿತನಾದ ನೀನು ಕಾನೂನು ಬಾಹಿರವಾಗಿ ಸಮಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ ವಿವಿಧ ಮದ್ಯದ ಬ್ರಾಂಡ್ ಗಳಿಂದ ಕೂಡಿದ ಒಟ್ಟು 17.280 ಲೀಟರ್ ಮದ್ಯವನ್ನು ಅಕ್ರಮವಾಗಿ ಸ್ವಾಧೀನ ಹೊಂದಿ, ಕರ್ನಾಟಕ ಅಬಕಾರಿ ಕಾಯಿದೆ ಕಲಂ 11, 12, 14, 14(2), 15 ಮತ್ತು 43(ಎ)ನ್ನು ಉಲ್ಲಂಘನೆ ಮಾಡಿ ಕಲಂ 38(ಎ) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು

ದಿ: 26-06-2024 ಜೆ ಎಂ ಎಫ್ ಸಿ, ಹೊಳಲ್ಕೆರೆ.